ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 6, January-February 2026, Pp. 178-180
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದಲ್ಲಿ ಜನಪ್ರಿಯ ಸಾಹಿತ್ಯ : ಒಂದು ವಿಶ್ಲೇಷಣೆ

**ಡಾ. ಶ್ರೀನಿವಾಸ ಟಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

***Abstract:***
*ಸಾಹಿತ್ಯದಲ್ಲಿ ವಚನ ಸಾಹಿತ್ಯ, ದಾಸ ಸಾಹಿತ್ಯ. ಪ್ರಾಚೀನ ಸಾಹಿತ್ಯ, ಆಧುನಿಕ ಸಾಹಿತ್ಯ, ಹೀಗೆಲ್ಲ ವಿಂಗಡಣೆಗಳಿವೆ. ಆದರೆ ಜನಪ್ರಿಯ ಸಾಹಿತ್ಯ ಎನ್ನುವುದು ಒಂದಿದೆಯೆ? ಇದು ಪ್ರಾರಂಭವಾದದ್ದು ಯಾವಾಗ? ಯಾರು ಪ್ರಾರಂಭಿಸಿದವರು? ಇದರ ಬೆಳವಣಿಗೆ ಹೇಗೆ? ಜನಪ್ರಿಯ ಸಾಹಿತ್ಯ ಎಂದರೆ ಏನು? ಎಂಬಿತ್ಯಾದಿ ಪ್ರಶ್ನೆಗಳಿಗೆ ಎರಡು ಶತಮಾನಗಳಷ್ಟು ಪರಂಪರೆ ಹೊಂದಿರುವ ಕನ್ನಡದ ಸಮೃದ್ಧ ಸಾಹಿತ್ಯದಲ್ಲಿ ಪಂಪನಿಂದ ಮೊದಲ್ಗೊಂಡು ರನ್ನ, ಜನ್ನರಂತಹ ಪುರಾತನ ಕವಿಗಳಿಂದ ಆರಂಭವಾಗಿ ದಾಸಸಾಹಿತ್ಯ, ವಚನ ಸಾಹಿತ್ಯ, ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಚಳುವಳಿಗಳವರೆಗೂ ಸಾಹಿತ್ಯ ಅನೇಕ ಪರಿವರ್ತನೆಗಳನ್ನು ಕಂಡಿದೆ. ಇಂತಹ ವೈವಿಧ್ಯತೆಯ ಸಾಹಿತ್ಯ ಪರಂಪರೆಯಲ್ಲಿಯೂ 'ಜನಪ್ರಿಯ ಸಾಹಿತ್ಯ' ಎನ್ನುವ ಸಾಹಿತ್ಯವು ವಿಶಿಷ್ಠ ಸ್ಥಾನವನ್ನು ಪಡೆದು ಕೊಂಡಿದೆ.*

***Keywords:*** *ಕನ್ನಡ ಸಾಹಿತ್ಯ, ಆಧುನಿಕ ಸಾಹಿತ್ಯ, ಜನಪ್ರಿಯ ಸಾಹಿತ್ಯ.*

## ಪೀಠಿಕೆ

ಇತ್ತೀಚೆಗೆ ಜನಪ್ರಿಯ, ಜನಪ್ರಿಯತೆ ಮುಂತಾದ ಶಬ್ದಗಳನ್ನು ಅತಿಯಾಗಿ ಬಳಸುತ್ತಿದ್ದೇವೆ. ಸಾಹಿತ್ಯದ ಜೊತೆ ಸೇರಿಕೊಂಡು ಈ ಶಬ್ದ ಬಂದರಂತೂ ನಮ್ಮ ಧೋರಣೆ ಬೇರೆಯೇ ಆಗುತ್ತದೆ. ಅಲ್ಲದೆ ಜನಸಾಮಾನ್ಯರ ಸ್ವತ್ತಾಗಿರುವ ಪತ್ರಿಕೆ, ದೂರದರ್ಶನ, ರೇಡಿಯೊ, ಚಲನಚಿತ್ರಗಳ ಬಗೆಗೂ ನಮ್ಮ ದೃಷ್ಟಿ ಇದೇ ಬಗೆಯದಾಗಿದೆ. ಈ ಕಾರಣದಿಂದಾಗಿ ಜನಪ್ರಿಯ ಸಾಹಿತ್ಯ ಎನ್ನುವುದು ಇಂದು ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ದೂರದರ್ಶನ, ರೇಡಿಯೋ, ಚಲನಚಿತ್ರಗಳು ಬಹಳ ಹಿಂದೆ ಇರಲಿಲ್ಲ. ಇವು ಏನಿದ್ದರು ಇತ್ತೀಚಿನ ಅತ್ಯಾಧುನಿಕವಾದ ಆವಿಷ್ಕಾರಗಳು. ಆದರೆ ಸಾಹಿತ್ಯ, ನಾಟಕ, ನೃತ್ಯ, ಸಂಗೀತ, ಇವುಗಳು ಇಂದಿನವಲ್ಲ. ಶತಮಾನಗಳಿಂದ ನಮ್ಮಲ್ಲಿ ಉಳಿದು, ಬೆಳೆದು ಬಂದಿವೆ.

ಬಿ.ಎಸ್.ಚಂದ್ರಶೇಖರ್ ತಮ್ಮ 'ಸಮೂಹ ಸಂಸ್ಕೃತಿ' (ಸಾಕ್ಷಿ, ಏಪ್ರಿಲ್ 1974) ಲೇಖನದಲ್ಲಿ 'ನೂರಿನ್ನೂರು ವರ್ಷಗಳ ಹಿಂದಿನ ಮತ್ತು ಈಗಿನ ಸಂಸ್ಕೃತಿಯನ್ನು ಪರಿಶೀಲಿಸಿದಾಗ ಹಿಂದೆ ಉನ್ನತ ಸಂಸ್ಕೃತಿ ಕೆಲವೇ ವಿಚಾರವಂತರ ಅನುಕೂಲವಂತರ, ಸಾಮಾಜಿಕವಾಗಿ ಗಣ್ಯರಾಗಿದ್ದವರ ಆಸ್ತಿಯಾಗಿತ್ತು ಎನ್ನುವುದರಲ್ಲಿ ಸಂಶಯವಿಲ್ಲ'. ಎಂದು ಅಭಿಪ್ರಾಯ ಪಡುತ್ತಾರೆ.

ನಮ್ಮ ಹಿಂದಿನ ಸಾಹಿತ್ಯ, ಕಲೆ, ಸಂಗೀತ, ನೃತ್ಯಗಳಲ್ಲಿ ಕ್ಲಿಷ್ಟತೆ ಇರುತಿತ್ತು. ಅದನ್ನು ಅರಿಯಲು ಅರ್ಥ ಮಾಡಿಕೊಳ್ಳಲು ಪ್ರತಿಭೆಯೋ, ಪಾಂಡಿತ್ಯವೋ ಬೇಕಾಗಿದ್ದುದರಿಂದ ಪ್ರತಿಭೆ, ಪಾಂಡಿತ್ಯ ಎಲ್ಲರಿಗೂ ದೊರಕುತ್ತಿಲ್ಲವಾದುದರಿಂದ ಈ ಹಿಂದೆ ಜನಪ್ರಿಯ

***Please cite this article as:*** ಶ್ರೀನಿವಾಸ, ಟಿ. (2026). ಕನ್ನಡ ಸಾಹಿತ್ಯದಲ್ಲಿ ಜನಪ್ರಿಯ ಸಾಹಿತ್ಯ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 4(6), 178–180

ಸಾಹಿತ್ಯ ಜನಪ್ರಿಯ ಕಲೆ ಎಂಬ ಬೇರೊಂದು ಪ್ರಕಾರ ಇತ್ತೆಂದು ಹೇಳಲಾಗುವುದಿಲ್ಲ. ಶಿಷ್ಟಕಲೆ, ಶಿಷ್ಟ ಸಾಹಿತ್ಯಕ್ಕೆ ಬದಲಾಗಿ ಜಾನಪದ ಕಲೆ, ಜಾನಪದ ಸಾಹಿತ್ಯ. ಬೆಳೆದು ಕೊಂಡು ಬಂದಿರಬಹುದು. ಆದರೂ ಕೂಡ ಕಾಳಿದಾಸನಂತಹ ಮಹಾಕವಿ,

***'ಅರಸಿಕೇಶ ಕವಿತ್ವ ನಿವೇದನಂ***
***ಸಿರಸಿ ಮಾಲಿಖ, ಮಾಲಿಖ.'***

ಅರಸಿಕರಿಗಾಗಿ ಕವಿತೆ ರಚಿಸುವುದನ್ನು ನನ್ನ ಹಣೆಯಲ್ಲಿ ಬರೆಯದಿರು ಎಂದು 3 ಬಾರಿ ಬೇಡಿಕೊಂಡಿದ್ದಾನೆಂದರೆ, ಅವನ ಕಾವ್ಯವನ್ನು ಅರ್ಥ ಮಾಡಿಕೊಳ್ಳುವ ಒಂದು ವರ್ಗ ಇತ್ತು ಎಂದಾಗುತ್ತದೆ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಗಂಭೀರ ಸಾಹಿತ್ಯವನ್ನು ಮೂಸಿ ನೋಡದ ಜನರಿದ್ದಾರೆ. ಈ ಕಾರಣದಿಂದಲೇ ಜನಪ್ರಿಯ ಸಾಹಿತ್ಯ ಎಂಬ ಪ್ರಾಕಾರ ಪ್ರಸಿದ್ದಿಯಾಗಿದೆ.

**ಜನಪ್ರಿಯ ಸಾಹಿತ್ಯದ ಅರ್ಥ ಮತ್ತು ಲಕ್ಷಣಗಳು**

ಜನಪ್ರಿಯ ಸಾಹಿತ್ಯವು ಜನರ ಹೃದಯದಲ್ಲಿ ನೆಲೆಗೊಳ್ಳುವ ಸಾಹಿತ್ಯ. ಸಾಮಾನ್ಯ ಜನರ ಬದುಕಿನ ಪ್ರತಿಬಿಂಬವಾಗಿದ್ದು, ಅವರ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸುತ್ತದೆ. ಜನರ ನಡುವೆ ವ್ಯಾಪಕವಾಗಿ ಓದಲ್ಪಡುವ, ಅರ್ಥಗರ್ಭಿತತೆಗಿಂತ ರಂಜಕತೆಗೆ ಒತ್ತು ನೀಡುವ ಜೊತೆಗೆ ಹೆಚ್ಚಿನ ಓದುಗರನ್ನು ಗಳಿಸುವ ಸಾಹಿತ್ಯ ಇದಾಗಿದ್ದು, ಇದಕ್ಕೆ ಕೆಲವು ಪ್ರಮುಖ ಲಕ್ಷಣಗಳಿವೆ. ಸರಳ ಮತ್ತು ಸುಗಮ ಭಾಷೆಯ ಬಳಕೆ, ಆಕರ್ಷಕ ಕಥಾಹಂದರ, ಜೀವನ ಸಂಬಂಧಿ ವಿಷಯಗಳು, ವೇಗದ ನಿರೂಪಣೆ, ಪುನರಾವೃತ್ತಿ ಮತ್ತು ಸರಣಿ ಕಥೆಗಳು.

ಕನ್ನಡ ಸಾಹಿತ್ಯದಲ್ಲಿ ಜನಪ್ರಿಯ ಸಾಹಿತ್ಯವು ವಿಶೇಷವಾಗಿ 20ನೇ ಶತಮಾನದಲ್ಲಿ ವೇಗವಾಗಿ ಬೆಳವಣಿಗೆ ಕಂಡಿತು. ಮುದ್ರಣ ಯಂತ್ರದ ಅಭಿವೃದ್ಧಿ, ವಾರಪತ್ರಿಕೆಗಳು ಮತ್ತು ಮಾಸಪತ್ರಿಕೆಗಳ ಪ್ರಸಾರ, ನಗರೀಕರಣ, ಇವುಗಳೆಲ್ಲ ಜನಪ್ರಿಯ ಸಾಹಿತ್ಯಕ್ಕೆ ಉತ್ತೇಜನ ನೀಡಿದವು. 'ಜನಪ್ರಿಯ ಸಾಹಿತ್ಯ ಸಂದರ್ಭದಲ್ಲಿ ನಾವು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಬಳಸುತ್ತಿರುವ ಕೆಲವು ಮಾತುಗಳನ್ನು ಉಪಯೋಗಿಸ ಬೇಕಾಗುತ್ತದೆ. ಉದಾಹರಣೆಗೆ ಉತ್ಪಾದನೆ, ಮಾರುಕಟ್ಟೆ, ಹಂಚಿಕೆ, ಗ್ರಾಹಕ, ದಲ್ಲಾಳಿ ಮುಂತಾದ ಪದಗಳು ಅಗತ್ಯ ಇಲ್ಲವೆ ಭೋಗ ವಸ್ತುವಿಗೆ ಸಂಬಂಧಿಸಿದಂತೆ ಕಾಣುವ ಎಲ್ಲಾ ಸಂಗತಿಗಳು ಒಂದು ಜನಪ್ರಿಯ ಸಾಹಿತ್ಯ ಕೃತಿಗು ಅನ್ವಯಿಸುತ್ತವೆ. ಗ್ರಾಹಕರ ಬೇಡಿಕೆಯು ಮಾರುಕಟ್ಟೆಯನ್ನು ಮತ್ತು ಪರೋಕ್ಷವಾಗಿ ವಸ್ತುವಿನ ರೂಪ ಮತ್ತು ಆಶಯಗಳನ್ನು ನಿಯಂತ್ರಿಸುವುದು ಒಂದು ದಿಕ್ಕು. ಇನ್ನೊಂದು ಉತ್ಪಾದಿತ ವಸ್ತುವಿನ ರೂಪ ಮತ್ತು ಆಶಯಗಳನ್ನೇ ಮಾರುಕಟ್ಟೆ ವ್ಯವಸ್ಥೆಯು ಗ್ರಾಹಕರ ನಿಜವಾದ ಅಪೇಕ್ಷೆಯೆಂದು ಭ್ರಮಿಸುವಂತೆ ಮಾಡುವುದು. ಈ ಎಲ್ಲಾ ಸಂಬಂಧಗಳ ಹಿನ್ನೆಲೆಯಲ್ಲಿ ಜನಪ್ರಿಯ ಸಾಹಿತ್ಯದ ಚರ್ಚೆ ಸಾಧ್ಯ. (ಜನಪ್ರಿಯ ಸಾಹಿತ್ಯ ಚರ್ಚೆಯ ನೆಲೆಗಳು.ಲೋಕ. ಮೇ 1979. ಕೆ.ವಿ.ನಾರಾಯಣ)

**ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಜನಪ್ರಿಯ ಸಾಹಿತ್ಯದ ಪಾತ್ರ, ಮತ್ತು ಬೆಳವಣಿಗೆ**

ಕನ್ನಡ ಸಾಹಿತ್ಯ ಇಂಗ್ಲಿಷಿನ ಪ್ರಭಾವಕ್ಕೆ ಒಳಗಾಗಿ ಸಂಪೂರ್ಣವಾಗಿ ತನ್ನ ಆಕಾರವನ್ನೆ ಬದಲಾಯಿಸಿ ಕೊಳ್ಳುವ ಮುನ್ನ ಕೆಲವೇ ಜನರ ಸ್ವತ್ತಾಗಿತ್ತು. ಇಂಗ್ಲಿಷ್ ಭಾಷೆ ನಮ್ಮ ಸಾಹಿತ್ಯಕ್ಕೆ ಕೆಲವು ಸರಳ ರೂಪಗಳನ್ನು ತಂದು ಕೊಟ್ಟಿತು. ಮುದ್ರಣಾಲಯಗಳು ಹೆಚ್ಚಾದಂತೆ ಪುಸ್ತಕಗಳು ಎಲ್ಲರ ಕೈಗೂ ಎಟುಕಲಾರಂಬಿಸಿದವು. ಆದರೆ ನವೋದಯ ಕವಿಗಳ ಕೃತಿಗಳು ಜನಪ್ರಿಯ ಎಂಬ ಅಲೆಗೆ ಸಿಲುಕಿರಲಿಲ್ಲ. ಜನಪ್ರಿಯ ಸಾಹಿತ್ಯವನ್ನು ಭದ್ರವಾಗಿ ತಳವೂರಿಸುವಲ್ಲಿ ವಾರಪತ್ರಿಕೆಗಳು, ಮಾಸಪತ್ರಿಕೆಗಳು, ಧಾರಾವಾಹಿ ಕಥೆಗಳು, ಹಾಗು ಪತ್ರಿಕೆಗಳು ಸಾಕಷ್ಟು ನೀರೆರೆಯುತ್ತಿವೆ. ಪತ್ರಿಕಾ ಮಾಲೀಕರಿಗೆ ಪತ್ರಿಕೆಗಳ ಪ್ರಸಾರ ಸಂಖ್ಯೆಯೇ ಮುಖ್ಯವಾಗಿರುವುದರಿಂದ ಪ್ರಸಾರ ಸಂಖ್ಯೆಯನ್ನು ಇಳಿಸಿ ಬಿಡುವಂತಹ ಸಾಹಿತ್ಯವನ್ನು ಪತ್ರಿಕೆಗಳವರು ಪ್ರಕಟಿಸುವುದಿಲ್ಲ.

ಜನಪ್ರಿಯ ಚಲನಚಿತ್ರಗಳವರು ತಮ್ಮ ಚಲನಚಿತ್ರದ ಯಶಸ್ಸಿಗೆ ಒಂದು ಚೌಕಟ್ಟನ್ನು ಹಾಕಿಕೊಳ್ಳುವ ಹಾಗೆ ಪತ್ರಿಕೆಗಳವರು ಹಾಕಿಕೊಳ್ಳುತ್ತಾರೆ. ಪತ್ರಿಕೆಗಳಲ್ಲಿ ಭಾಗಶ: ಪ್ರಕಟವಾಗುತ್ತಿದ್ದ ಕಾದಂಬರಿಗಳು ಓದುಗರಲ್ಲಿ ಕುತೂಹಲ ಹುಟ್ಟಿಸುತ್ತಿದ್ದವು. ಪ್ರತೀವಾರ ಮುಂದಿನ ಭಾಗಕ್ಕಾಗಿ ಕಾಯುವ ಸಂಪ್ರದಾಯ ಜನಪ್ರಿಯ ಸಾಹಿತ್ಯದ ಬೆಳವಣಿಗೆಗೆ ನೆರವಾಯಿತು.

'ಜನಪ್ರಿಯ ಸಾಹಿತ್ಯ ಅದರ ಪಾಲಿಗೆ ಅದು ಬೆಳೆಯಲಿ, ಅದರ ಗೊಡವೆ ನಮಗೇಕೆ' ಎನ್ನುವ ಮನೋಭಾವ ನಮ್ಮ ಬಹಳಷ್ಟು ಜನ ವಿಮರ್ಶಕರಲ್ಲಿ, ಲೇಖಕರಲ್ಲಿ ಇರುವ ಹಾಗಿದೆ. ಜನಪ್ರಿಯ ಪತ್ರಿಕೆಗಳ ಬಗ್ಗೆ ಅವುಗಳಿಗೆ ಬರೆಯುವುದರ ಬಗ್ಗೆಯೂ ಇದೇ ರೀತಿಯ ಮನೋಭಾವವಿದೆ. ಆದರೆ ಸಾಹಿತ್ಯದ ದೃಷ್ಟಿಯಿಂದ ಮಾತ್ರವಲ್ಲ, ಜನಪ್ರಿಯ ಸಾಹಿತ್ಯವನ್ನು ಅತಿಯಾಗಿ ಹಚ್ಚಿಕೊಂಡಿರುವ ಜನರ ಹಿತದೃಷ್ಟಿಯಿಂದಲೂ ಈ ಬಗೆಯ ಮನೋಭಾವ ಒಳಿತಲ್ಲ. ಇದರ ಬದಲು ಅಂತಹ ಜನರನ್ನು ತಮ್ಮ ತೆಕ್ಕೆಗೆ ತೆಗೆದು ಕೊಳ್ಳುವ ಅವರ ಇತಿಮಿತಿಗಳ ಬಗ್ಗೆ ಚರ್ಚಿಸುವ ಒಂದು ಕೆಲಸವನ್ನು ಆರಂಭಿಸುವುದು ಒಳಿತು. ಜನಪ್ರಿಯ ಸಾಹಿತ್ಯವು ಹಲವು ಉಪಪ್ರಕಾರಗಳನ್ನು ಒಳಗೊಂಡಿದ್ದು ಅವುಗಳಲ್ಲಿ ಪ್ರೇಮಕಥೆಗಳು, ರಹಸ್ಯ ಕಥೆಗಳು, ಸಾಮಾಜಿಕ ಕಾದಂಬರಿಗಳು, ಐತಿಹಾಸಿಕ ಮತ್ತು ಪೌರಾಣಿಕ ಕಥೆಗಳು ಮುಂತಾದವಿವೆ. ಇಷ್ಟೆಲ್ಲಾ ಇದ್ದರೂ ಜನಪ್ರಿಯ ಸಾಹಿತ್ಯವು ಕೇವಲ ಮನರಂಜನೆಯ ಸಾಧನವಾಗದೆ ಅದು ಸಮಾಜದ ಚಿಂತನೆಗಳನ್ನು ರೂಪಿಸುವ ಸಾಮರ್ಥ್ಯ, ಸಾಮಾಜಿಕ ಜಾಗೃತಿ, ಮೌಲ್ಯ ಪ್ರಚಾರ, ಓದಿನ ಸಂಸ್ಕೃತಿಯ ವಿಸ್ತರಣೆಯಂತಹ ಗುರಿಯನ್ನು ಹೊಂದಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಜನಪ್ರಿಯ ಸಾಹಿತ್ಯವು ಹೊಸರೂಪ ಪಡೆದಿದೆ. ಇ–ಪುಸ್ತಕಗಳು, ಬ್ಲಾಗ್‌ಗಳು, ಸಾಮಾಜಿಕ ಜಾಲತಾಣಗಳು, ಆನ್ಲೈನ್ ಧಾರಾವಾಹಿಗಳು ಹೆಚ್ಚೆಚ್ಚು ಜನಪ್ರಿಯವಾಗುತ್ತಿವೆ.

**ಉಪಸಂಹಾರ**

ಜನಪ್ರಿಯ ಸಾಹಿತ್ಯವು ಜನಮನದ ಸಾಹಿತ್ಯ. ಅದು ಸಮಾಜದ ಸ್ಪಂದನೆಗೆ ತಕ್ಕಂತೆ ರೂಪಾಂತರಗೊಳ್ಳುತ್ತಾ ಬರುತ್ತಿದೆ. ಗಂಭೀರ ಸಾಹಿತ್ಯವು ಚಿಂತನೆಗೆ ಪ್ರೇರೇಪಿಸಿದರೆ, ಜನಪ್ರಿಯ ಸಾಹಿತ್ಯವು ಓದುಗರ ಮನಸ್ಸನ್ನು ರಂಜಿಸಿ. ಓದುವ ಹವ್ಯಾಸವನ್ನು ಬೆಳೆಸುತ್ತದೆ. ಇವೆರಡೂ ಸಾಹಿತ್ಯದ ಅವಿಭಾಜ್ಯ ಅಂಗಗಳು. ಹೀಗಾಗಿ ಜನಪ್ರಿಯ ಸಾಹಿತ್ಯವನ್ನು ತಳಮಟ್ಟದ ಸಾಹಿತ್ಯವೆಂದು ತಿರಸ್ಕರಿಸುವುದಕ್ಕಿಂತ ಅದರ ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಪಾತ್ರವನ್ನು ಅರಿತು, ಅದನ್ನು ಸಾಹಿತ್ಯದ ಸಮಗ್ರ ಚಿತ್ರಣದ ಭಾಗವಾಗಿ ನೋಡಬೇಕು. ಜನಪ್ರಿಯ ಸಾಹಿತ್ಯವು ಕೇವಲ ಪುಸ್ತಕಗಳಲ್ಲ. ಅದು ಜನರ ಕನಸುಗಳ ಭಾಷೆ, ಅವರ ಭಾವನೆಗಳ ಪ್ರತಿಧ್ವನಿ, ಅವರ ಜೀವನದ ಕಥನ.

**ಪರಾಮರ್ಶನ ಗ್ರಂಥಗಳು.**


- ನಾಗಭೂಷಣ ಸ್ವಾಮಿ. ಓ.ಎಲ್. (ಸಂ.). (1989). *ಸಾಹಿತ್ಯ ವಿಮರ್ಶೆ.*
- ಮುರುಳೀಧರ ಉಪಾಧ್ಯ ಹಿರಿಯಡಕ. (ಸಂ.). (1990). ಸಾಹಿತ್ಯ ವಿಮರ್ಶೆ:
- ಚಂದ್ರಶೇಖರ್, ಬಿ.ಎಸ್. (1974, ಏಪ್ರಿಲ್) *ಸಮೂಹ ಸಂಸ್ಕೃತಿ: ಸಾಕ್ಷಿ.*
- ನಾರಾಯಣ, ಕೆ.ವಿ. (1979 ಮೇ) *ಜನಪ್ರಿಯ ಸಾಹಿತ್ಯ ಚರ್ಚೆಯ ನೆಲೆಗಳು.* ಲೋಕ.